ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:19.07.16

ಈ ವಾರದ ಮುನ್ಸೂಚನೆ (20.7.16 to 24.7.16 ವರೆಗೆ)

ನಿಯತಾಂಕಗಳು	20.07.16	21.07.16	22.07.16	23.07.16	24.07.16
ಮಳೆ (ಮಿ ಮಿ)	5	2	0	3	11
ಗರಿಷ್ಠ ಉಷ್ಣಾಂಶ(ಡಿ.ಸೆ.)	29	30	32	32	31
ಕನಿಷ್ಠ ಉಷ್ಣಾಂಶ (ಡಿ.ಸೆ.)	20	19	20	20	20
ಮೋಡ (ಪ್ರಮಾಣ)	7	7	7	7	7
ಆರ್ದ್ರತೆ ೭.೨೦ ಬೆ (ಶೇ)	90	90	89	88	92
ಆರ್ದ್ರತೆ ೨.೨೦ ಮ (ಶೇ)	61	53	52	56	54
ಗಾಳಿಯ ವೇಗ (ಕಿ.ಮಿ/ಗಂಟೆಗೆ)	20	21	20	18	17
ಗಾಳಿಯ ದಿಕ್ಕು (ಡಿಗ್ರಿ)	291	292	292	292	292

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಪಟ್ರೇನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿದ್ದು ತುಂತುರು ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶವು 29–32^{o}C ಮತ್ತು ಕನಿಷ್ಠ 19-20^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 88-92 % ಇದ್ದು, ಮಧ್ಯಾಹ್ನ 52-61% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 17-21 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಬಿತ್ತನೆಗೆ ಮೊದಲು ಸಾವಯವ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಹಾಗು ಭೂಮಿಯನ್ನು ಮಟ್ಟಮಾಡಿ ಬಿತ್ತನೆಗೆ ಹದಮಾಡಿಕೊಳ್ಳುವುದು.
- ಖುಷ್ಕಿ ಜಮೀನಿನಲ್ಲಿ ಬದುಗಳನ್ನು ಭದ್ರಗೊಳಿಸಬೇಕು, ಸೂಕ್ತ ಬಸಿಗಾಲುವೆಗಳನ್ನು ನಿರ್ಮಿಸಿಕೊಂಡು ನೀರು ನಿಲ್ಲದಂತೆ ನೋಡಿಕೊಳ್ಳಿ
- ಮಳೆ ಬಂದಿರುವ ಕಡೆ ತೇವಾಂಶದ ಆಧಾರದ ಮೇಲೆ ಮಧ್ಯಮಾವಧಿ ಬೆಳೆಗಳನ್ನು ಬಿತ್ತನೆ ಮಾಡಬಹುದು
- ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು (ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ತೇವಾಂಶದ ಸಂರಕ್ಷಣೆಗಾಗಿ ಮತ್ತು ಇರುವಂತಹ ಕಳೆ ನಿರ್ವಹಣೆಗೋಸ್ಕರ, ಒಂದೆರಡು ಬಾರಿ ಕುಂಟೆ ಹಾಯಿಸುವುದು.
- ವೇಗವಾದ ಗಾಳಿ ಇರುವುದರಿಂದ ಟೊಮ್ಯಾಟೊ ಹಾಗೂ ಇನ್ನಿತರೆ ತರಕಾರಿ ಬೆಳೆಗಳಿಗೆ ರಕ್ಷಣೆ ಕೊಡುವುದು ಅತಿ ಮುಖ್ಯ.
- ಗುಲಾಬಿ: ಕಬ್ಬಿಣದ ಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ–೨೦ ಅಥವಾ ಮಲ್ಟಿಪ್ಲೆಕ್ಸ್ ನ ಲಘು ಪೋಷಕಾಂಶಗಳನ್ನು ಕೊಡಬೇಕು.

ಜುಲೈ–ಆಗಸ್ಟ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು: ತೇವಾಂಶದ ಆಧಾರದ ಮೇಲೆ ಬಿತ್ತನೆ ಮಾಡಬೇಕು

ಮುಂಗಾರು ಬೆಳೆಗಳಾಗಿ ಈ ಕೆಳಗಿನ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ

ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4ಮತ್ತು 5, **ಹರಳು**: ಡಿ.ಸಿ.ಎಸ್–9 (ಜ್ಯೋತಿ), ಡಿ.ಸಿ.ಎಚ್–177 ಮತ್ತು 32

ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪ್ಲೋಸಿಟ್, ಕಾಂಪ್ಲೋಸಿಟ್ ಎನ್.ಐ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ.

ರಾಗಿ: ಇಂಡಾಫ್–9, ಎಳ್ಳು : ನವಿಲೆ–1, ಟಿ–7, **ಅಲಸಂದೆ** : ಟಿ.ವಿ.ಎಕ್ಸ್–944, ಕೆ.ಬಿ.ಸಿ–1,**ಹೆಸರು** :ಪಿ.ಎಸ್–16, ಪಿ.ಡಿ.ಎಮ್–84, 178 , **ಉದ್ದು**: ಕರಗಾವ್–3, ಟಿ–9, ರಶ್ಮಿ,

ಶೇಂಗಾ : ಜೆ ಎಲ್–24, ಟಿ.ಎಮ್.ವಿ–2, **ಸೂರ್ಯಕಾಂತಿ**: ಮಾರ್ಡೆನ್, ಪೆಬ್ರಿಡ್ ತಳಿಗಳು:ಕೆ.ಬಿ.ಎಸ್.ಎಚ್–1, 41, 42, 44, 53.

ಜುಲೈ ಮೂರನೇ ವಾರದೊಳಗೆ ನೆಲಗಡಲೆ, ತೊಗರಿ+ನೆಲಗಡಲೆ (4:1 ಅಥವಾ 8:2 ಸಾಲುಗಳ ಪ್ರಮಾಣದಲ್ಲಿ), ಮಧ್ಯಮವಾಧಿ ತಳಿ ರಾಗಿ, ಹಾರಕ, ಸಾಮೆ, ಬರಗು, ಹರಳು ಬಿತ್ತನೆ ಮಾಡುವುದು ಸೂಕ್ತ. ಪ್ರತಿ ವರ್ಷ ರಾಗಿಯನ್ನೇ ಬೆಳೆದುಕೊಳ್ಳದೆ ಬೆಳೆಗಳ ಬದಲಾವಣೆ ಮಾಡಿ ರಾಗಿ– ಅವರೆ, ರಾಗಿ – ತೊಗರಿ, ರಾಗಿ– ಕಡ್ಲೇಕಾಯಿ ಬೆಳೆಗಳನ್ನು ಬೆಳೆಯುವುದು ಲಾಭಕರ.

ಸಸ್ಯ ಸಂರಕ್ಷಣೆ:

ರಸ ಹೀರುವ ಕೀಟಗಳು: ಇವುಗಳ ಹತೋಟಿಗೆ ಶೇ. ೪ರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು